<u>ಸಾಕ್ಷಿಯನ್ನು ದಿನಾಂಕ **17-10-2022** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು **3** ನೇ ಪಕ್ಷಗಾರರ ಪರ ಶ್ರೀ ಬಿ ವಿ ಎಂ ವಕೀಲರಿಂದಃ</u>

ನನಗೆ ಟಿ. ನಾಗೇಶ್ವರ್ ರಾವ್ ತಂದೆಃ ಪುಲಿರಾಜು ಇವರು ಪರಿಚಯ ಇದ್ದಾರೆ. ನನ್ನ ತಂದೆಯ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಕರಾರುಪತ್ರ ಆಗುವ ಮೊದಲೇ ಟಿ. ನಾಗೇಶ್ವರ್ ರಾವ್ ಇವರ ಹೆಸರಿನಲ್ಲಿ ಖರೀದಿ ಕರಾರುಪತ್ರ ಆಗಿತ್ತು ಎಂದರೆ ಸರಿಯಲ್ಲ. ನನಗೆ ತೋರಿಸಿದ ದಾಖಲಾತಿಯಂತೆ ಜೆಡಿಆರ್ ಮತ್ತು ಟಿ. ನಾಗೇಶ್ವರ್ ರಾವ್ ಮಧ್ಯೆ ದಿಃ 15-10-2011 ರಂದು ಖರೀದಿ ಕರಾರುಪತ್ರದ ವ್ಯವಹಾರ ಆಗಿರುವುದು ನನಗೆ ಗೊತ್ತಿಲ್ಲ. ಈ ವ್ಯವಹಾರ ಆಗಿರುವ ವಿಚಾರ ನನಗಾಗಲೀ ಮತ್ತು ನನ್ನ ತಂದೆಗಾಗಲೀ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖರೀದಿ ಕರಾರು ಆಗುವುದಕ್ಕಿಂತ ಮೊದಲು ದಾಖಲಾತಿಗಳನ್ನು ಪರಿಶೀಲಿಸಿದ್ದೇವೆ. ನನಗೆ ತೋರಿಸಿದ ದಾಖಲಾತಿಯಂತೆ ನಮ್ಮ ಹೆಸರಿನಲ್ಲಿ ಬರೆದುಕೊಡುವ ಖರೀದಿ ಕರಾರು ಪತ್ರ ಆಗುವ ದಿವಸವೇ ಟಿ. ನಾಗೇಶ್ವರ್ ರಾವ್ ಅವರ ಹೆಸರಿಗೆ ಬರೆದುಕೊಟ್ಟ ಕರಾರುಪತ್ರ ರದ್ದು ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಟಿ. ನಾಗೇಶ್ವರ್ ರಾವ್ ಇವರ ರದ್ದತಿ ಪತ್ರಕ್ಕೆ ನನ್ನ ತಂದೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮಾಡಿಕೊಂಡ ಖರೀದಿ ಕರಾರುಪತ್ರಕ್ಕೆ ಟಿ. ನಾಗೇಶ್ವರ್ ರಾವ್ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ಟಿ. ನಾಗೇಶ್ವರ್ ರಾವ್ ಅಸಲು ದಾವೆಯಲ್ಲಿ ನನ್ನ ತಂದೆಯ ಪರ ಸಾಕ್ಷಿ ಹೇಳಿರುವ ವಿಚಾರ ನನಗೆ ಗೊತ್ತಿಲ್ಲ. ಟಿ. ನಾಗೇಶ್ವರ್ ರಾವ್, ನನ್ನ ತಂದೆ ಹಾಗೂ ದಶರಥ ರಾಮಯ್ಯ ಸೇರಿ ಜೆಡಿಆರ್ ರವರ ತಾಯಿ ಮತ್ತು ತಂಗಿಗೆ ಗೊತ್ತಾಗದ ಹಾಗೆ ಖರೀದಿ ವ್ಯವಹಾರ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಖರೀದಿ ಕರಾರುಪತ್ರ ರೂ. 19 ಲಕ್ಷ ಇರುತ್ತದೆ. ಜೆಡಿಆರ್ ಈಗ ಸಾಲುಂಚಿಮರದಲ್ಲಿ ಇದ್ದಾರೆ. ಜೆಡಿಆರ್ ಸಾಲುಂಚಿಮರದಲ್ಲಿ ಇಲ್ಲ, ಸಿದ್ದಾಪುರದ ಕಡೆ ಇದ್ದಾನೆ ಎಂದರೆ ಸರಿಯಲ್ಲ. ಜೆಡಿಆರ್ ತಂದೆ ತೀರಿಕೊಂಡಾಗಿನಿಂದ ಜೆಡಿಆರ್ ಈತ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಜೆಡಿಆರ್ ಈತನಿಗೆ ಕೆಟ್ಟ ಚಟ ಇದ್ದಿದ್ದರಿಂದ ಆತನನ್ನು

ಮನೆಯಿಂದ ಹೊರಗೆ ಇಟ್ಟಿದ್ದರು ಎಂದರೆ ಸರಿಯಲ್ಲ. ಜೆಡಿಆರ್ ಇಸ್ಪೀಟು, ಕುಡಿತ ಮತ್ತು ದುಂದುವೆಚ್ಚದ ಚಟ ಹೊಂದಿದವನಾಗಿದ್ದ ಎಂದರೆ ಸರಿಯಲ್ಲ. ಜೆಡಿಆರ್ ತಂದೆ ತೀರಿಕೊಂಡಾಗ ಜೆಡಿಆರ್ ನ ಹೆಂಡತಿ ಮತ್ತು ಮಕ್ಕಳೇ ಜಮೀನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಯಾವತ್ತೂ ಜೆಡಿಆರ್ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ, ಸ್ವಾಧೀನಕ್ಕೂ ಹೋಗಿಲ್ಲ ಎಂದರೆ ಸರಿಯಲ್ಲ. ಜೆಡಿಆರ್ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುವುದರಿಂದ ಅದರ ದುರ್ಲಾಭ ಪಡೆಯುವ ಸಲುವಾಗಿ ಈ ಸುಳ್ಳು ಪ್ರಕರಣ ಹಾಕಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ಜೆಡಿಆರ್ ತಂದೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿ ಪತ್ರದ ಮುಖಾಂತರ ಖರೀದಿ ಮಾಡಿದ ಆಸ್ತಿ ಎಂದರೆ ಸರಿಯಲ್ಲ. ಜೆಡಿಆರ್ ನ ತಂದೆ ಯಾರಿಗೂ ವಿಭಾಗ ಮಾಡದೇ ತೀರಿಕೊಂಡಿರುವುದರಿಂದ ಜೆಡಿ ಆರ್ ಮತ್ತು ಅರ್ಜಿದಾರರಿಗೆ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ವೆಚ್ಚ ವಿಧಿಸಿ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.